**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ -**

**ಮುಂದುವರೆದ ಮುಖ್ಯ ವಿಚಾರಣೆ ವಾದಿಯರ ಪರ ಶ್ರೀ ಆರ್ ವಿ ವಕೀಲರಿಂದಃ-**

ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿದ್ದೇನೆ, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನಾನು ಈ ಕೆಳಕಂಡ ದಾಖಲೆಗಳನ್ನು ನನ್ನ ಪರವಾಗಿ ನಿಶಾನೆಗಳೆಂದು ಗುರುತಿಸಿಕೊಂಡಿರುತ್ತೇನೆಃ-

ನಿಪಿ-1. ಸರ್ವೆ ನಂಃ14/7 ರ ಪಹಣಿ ಪತ್ರಿಕೆ,

ನಿಪಿ-2. ಸರ್ವೆ ನಂಃ14/1 ರ ಪಹಣಿ ಪತ್ರಿಕೆ,

ನಿಪಿ-3. ಆಸ್ತಿ ನಂಃ33 ರ ಡಿಸಿಬಿ ರಿಜಿಸ್ಟರ್ ನ ಯಥಾ ನಕಲು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ ವಿ ಓ ವಕೀಲರಿಂದಃ-**

ನನ್ನ ಮದುವೆಯಾಗಿ 20 ವರ್ಷಗಳಾಗಿರುತ್ತವೆ. ಈ ಹಿಂದೆ ನನ್ನ ತಂದೆ ಮತ್ತು ಮಾವ ಪಾಲುವಿಭಾಗ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಮಾವನಿಗೆ ಪಾಲುವಿಭಾಗದಲ್ಲಿ ಬಂದಂತಹ ಸ್ವತ್ತುಗಳನ್ನು ನಾನು ಈ ದಾವೆಯಲ್ಲಿ ಕೇಳಿರುತ್ತೇನೆ ಎಂದರೆ ಸರಿ. ನನ್ನ ಮಾವ ಅವರ ಮಕ್ಕಳಿಗೆ ಬಾಯಿಮಾತಿನ ಮೂಲಕ ಸ್ವತ್ತುಗಳಲ್ಲಿ ಪಾಲುವಿಭಾಗ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಸರ್ವೆ ನಂಃ14/7 ಮತ್ತು ಸರ್ವೆ ನಂಃ14/1 ರಲ್ಲಿ ನನ್ನ ಯಜಮಾನರಿಗೆ ಪಾಲುವಿಭಾಗದಲ್ಲಿ ಬಂದ ಸ್ವತ್ತಿನಲ್ಲಿ ನಾವು ಉಳಿಮೆ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ನೀವು ಎಂದೂ ಕ್ಯಾಸಪುರದಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸಾಕ್ಷಿಯು ವಾಸ ಮಾಡುತ್ತಿದ್ದೇನೆ ಎನ್ನುತ್ತಾರೆ. ಒಟ್ಟು ಕುಟುಂಬಕ್ಕೆ ಕ್ಯಾಸಪುರದಲ್ಲಿರುವ ಖಾಲಿ ನಿವೇಶನ 30X40 ಅಡಿ ವಿಸ್ತೀರ್ಣದ ಸ್ವತ್ತನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಉದ್ದೇಶಪೂರ್ವಕವಾಗಿ ನಾನು ಸದರಿ ಸ್ವತ್ತನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಪಿ ಡಬ್ಲೂ-01

2. ನನ್ನ ಮಾವನಿಗೆ 4 ಜನ ಮಕ್ಕಳು. ಅವರಲ್ಲಿ ನನ್ನ ಯಜಮಾನರು, ಸಿದ್ದಪ್ಪ, ನಿಂಗಪ್ಪ ಹಾಗೂ ದ್ರಾಕ್ಷಾಯಿಣಿ. ಈ ಹಿಂದೆಯೂ ನೀವು ನಿಮ್ಮ ಪಾಲಿಗೆ ಕೊಟ್ಟಂತಹ ಜಮೀನುಗಳನ್ನು ಉಳಿಮೆ ಮಾಡಿಕೊಂಡು ಕ್ಯಾಸಪುರದಲ್ಲಿ ವಾಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಕ್ಯಾಸಪುರದಲ್ಲಿ ವಾಸವಿದ್ದೇವೆ ಆದರೆ ಜಮೀನು ಕೊಟ್ಟಿಲ್ಲ ಎನ್ನುತ್ತಾರೆ. ಆಸ್ತಿ ನಂಃ33 ರ ವಿಸ್ತೀರ್ಣವನ್ನು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಪಾಲಿಗೆ ಕೊಡಬೇಕಾದ 1/5 ಪಾಲನ್ನು ಕೊಡಲು ಸಿದ್ದರಿದ್ದರೂ ಸಹ ನಾನು ಪಡೆದುಕೊಳ್ಳಲು ಒಪ್ಪಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು}**

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ಮತ್ತು ಸಿ ಜೆ ಎಂ ನ್ಯಾಯಾಧೀಶರು

ಚಿತ್ರದುರ್ಗ